ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಗೌರವಧನ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:** (1) ದಿನಾಂಕ: 01.08.2002 ರ ಸರ್ಕಾರದ ಆದೇಶ ಸಂಖ್ಯೆ ಇಡಿ 107 ಪಿಬಿಎಸ್ 2000

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ: ಬೆಂಗ್ರಾಜಿಪಂ/ಸಿ8(ಶಿ)/ಗೌರವಧನ/70/1989-90, ದಿ: 09.12.2004

(3) ನಿರ್ದೇಶಕರು (ಪ್ರಾ.ಶಿ.), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿ. 12.9.2007ರ ಪತ್ರ ಸಂಖ್ಯೆ ಸಿ3(7)/ಪ್ರಾಶಿ.ಗೌಶಿ 1/2006-07

* * * *

ಪ್ರಸ್ತಾವನೆ :-

1988-89ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ಕೊರತೆ ಇದ್ದುದರಿಂದ, ಕೆಲವು ಜಿಲ್ಲಾ ಪಂಚಾಯತ್ ಮತ್ತು ಮಂಡಲ್ ಪಂಚಾಯತ್‌ಗಳು ಗೌರವಧನ ಆಧಾರದ ಮೇಲೆ, ಅಡ್-ಹಾಕ್ (Ad-hoc) ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿಕೊಂಡಿರುತ್ತದೆ. ಸದರಿ ನೇಮಕಾತಿಯಲ್ಲಿ ಯಾವುದೇ ನೇಮಕಾತಿ ನಿಯಮಗಳನ್ನಾಗಲೀ ಅಥವಾ ಮೀಸಲಾತಿ ನಿಯಮಗಳನ್ನಾಗಲೀ ಅನುಸರಿಸಿರುವುದಿಲ್ಲ. ಈ ಗೌರವ ಶಿಕ್ಷಕರಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ/ಮಂಡಲ ಪಂಚಾಯತಿಗಳು ಅವುಗಳ ಸಂಪನ್ಮೂಲಗಳಿಂದ ತಿಂಗಳಿಗೆ ರೂ. 300/- ರಿಂದ 800 ರವರೆಗೆ ಮಾಸಿಕ ಗೌರವ ಧನ ನೀಡುತ್ತಾ ಬಂದಿದೆ. ಗೌರವ ಶಿಕ್ಷಕರಾಗಿ ನೇಮಕಗೊಂಡವರಲ್ಲಿ ಬಹುತೇಕ ಅಭ್ಯರ್ಥಿಗಳು ಶಿಕ್ಷಕರ ಹುದ್ದೆಗೆ ನಿಗಧಿತ ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲ.

2. ಇಂತಹ ಕೆಲವು ಗೌರವ ಶಿಕ್ಷಕರು ಅವರ ಸೇವೆಯನ್ನು ಖಾಯಂಗೊಳಿಸುವಂತೆ ಕೋರಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸರ್ವೋಚ್ಚ ನ್ಯಾಯಾಲಯವು ಅರ್ಜಿ ಸಂಖ್ಯೆ 243/90 ಮತ್ತು 354/90 ರಲ್ಲಿ ದಿ. 10.7.1991 ರ ಆದೇಶದಲ್ಲಿ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಅವರ ಸೇವೆಗೆ ಅನುಗುಣವಾಗಿ ಸೇವಾ ಕೃಪಾಂಕ ನಿರ್ಧರಿಸಿ ಇತರರೊಂದಿಗೆ ನೇರ ನೇಮಕಾತಿಗಳಲ್ಲಿ ಪರಿಗಣಿಸುವಂತೆ ನಿರ್ದೇಶನ ನೀಡಿತು. ಅದರನ್ವಯ ತದನಂತರದ ನೇಮಕಾತಿಗಳಲ್ಲಿ ಕೃಪಾಂಕ ನೀಡಿ ಅರ್ಹತೆ ಹೊಂದಿದ ಗೌರವ ಶಿಕ್ಷಕರನ್ನು ನೇರ ನೇಮಕಾತಿ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. ಆದರೆ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರದ ತರಬೇತಿ ರಹಿತ ಗೌರವ ಶಿಕ್ಷಕರು ನೇರ ನೇಮಕಾತಿಯಲ್ಲಿ ನೇಮಕಗೊಳ್ಳದೇ ಹಾಗೆಯೇ ಮುಂದುವರೆದಿರುವರು.

3. ಮೇಲೆ ಓದಲಾದ (1) ರ ದಿ. 01.08.2002 ರ ಆದೇಶದನ್ವಯ ಜಿಲ್ಲಾ ಪಂಚಾಯತ್/ಮಂಡಲ್ ಪಂಚಾಯತ್‌ಗಳಿಗೆ ಗೌರವಧನದ ಆಧಾರದ ಮೇಲೆ ನೇಮಕಗೊಂಡು ಇನ್ನೂ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಗೌರವ ಶಿಕ್ಷಕರನ್ನು ಸೇವೆಯಿಂದ ಬಿಡುಗಡೆಗೊಳಿಸುವಂತೆ ಆದೇಶಿಸಲಾಯಿತು.

4. ಸರ್ಕಾರದ ಆದೇಶದ ವಿರುದ್ಧ ಕೆಲವು ಗೌರವ ಶಿಕ್ಷಕರು ಮಾತ್ರ ನ್ಯಾಯಾಲಯದ ಮೊರೆ ಹೋಗಿ, ತಡೆಯಾಜ್ಞೆ ತಂದ ಕಾರಣ ಕೆಲವರು ಕೆಲಸದಲ್ಲಿ ಮುಂದುವರೆಯುತ್ತಿದ್ದಾರೆ. ಸದ್ಯದಲ್ಲಿ ಈಗ ರಾಜ್ಯದಲ್ಲಿ

ಸುಮಾರು ಒಟ್ಟು 261 ಗೌರವ ಶಿಕ್ಷಕರು ಮಾತ್ರ ಕರ್ತವ್ಯದಲ್ಲಿದ್ದು, ಅವರಲ್ಲಿ ಬಹುತೇಕ ಶಿಕ್ಷಕರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ತರಬೇತಿ ರಹಿತ ಶಿಕ್ಷಕರಾಗಿರುತ್ತಾರೆ. ಇವರಿಗೆ ತಾಲ್ಲೂಕು ಪಂಚಾಯಿತಿ ವತಿಯಿಂದ ಶಿಕ್ಷಕರ ವೇತನ ಶೀರ್ಷಿಕೆಯಡಿಯಲ್ಲಿಯೇ Consoldiation Pay ನೀಡಲಾಗುತ್ತಿದೆ ಎಂದು ತಿಳಿಸಿ ಗೌರವ ಶಿಕ್ಷಕರಿಗೆ ಈಗ ನೀಡುತ್ತಿರುವ ಗೌರವಧನವನ್ನು ಹೆಚ್ಚಿಸುವ ಬಗ್ಗೆ ಮೇಲೆ ಓದಲಾದ (3) ರ ಪತ್ರದಲ್ಲಿ ನಿರ್ದೇಶಕರು (ಪ್ರಾಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರದ ಆದೇಶ ಕೋರಿದ್ದಾರೆ.

5. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ, ಈ ಸಂಬಂಧ ವಿಷಯ ಪ್ರಸ್ತಾಪಿಸಿ, ಗೌರವ ಶಿಕ್ಷಕರಿಗೆ ಮಾಹೆಯಾನ ಗೌರವ ಧನವನ್ನು ರೂ. 800/- ರಿಂದ ರೂ. 2,000/- ಕ್ಕೆ ಹೆಚ್ಚಿಸುವಂತೆ ಠರಾವು ಮಾಡಿರುತ್ತಾರೆ. ಈ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿಯನ್ನು ಕೋರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಮೇಲೆ ಓದಲಾದ (2) ರ ದಿ: 09.12.2004 ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

6 ಮೇಲೆ ವಿವರಿಸಿದ ಅಂಶಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 184 ಪಿಬಿಎಸ್ 2004**

**ಬೆಂಗಳೂರು, ದಿನಾಂಕ : 01.03.2008**

7. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಗೌರವ ಧನವನ್ನು ರೂ. 800/- ಗಳಿಂದ ರೂ. 1600/- ಕ್ಕೆ ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಹೆಚ್ಚಿಸಲು ಮಂಜೂರಾತಿ ನೀಡಿದೆ. ಈ ಗೌರವಧನ ಹೆಚ್ಚಳದಿಂದ ಈ ಶಿಕ್ಷಕರ ತಾತ್ಕಾಲಿಕ ಸ್ಥಾನಮಾನದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಆಗುವುದಿಲ್ಲ. ಇದನ್ನು ಗೌರವಧನವೆಂದೇ ಪರಿಗಣಿಸಬೇಕು. ಇದನ್ನು ಮಾನವೀಯತೆಯ ದೃಷ್ಟಿಯಿಂದ ಹೆಚ್ಚಿಸಿದ್ದು, ಯಾವುದೇ ಸಂಬಳ/ಭತ್ಯೆ ಎಂದು ಪರಿಗಣಿಸಬಾರದು.

8. ಈ ಆದೇಶವನ್ನು ಆರ್ಥಿಕ ಇಲಾಖೆಯ ದಿ. 12.2.2008 ರ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 43 ವೆಚ್ಚ-8/08ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

1/3/08
(ಸಿ. ಬಸವರಾಜು)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ
1/3/08

ಪ್ರತಿಯನ್ನು:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗಾ
2. ನಿರ್ದೇಶಕರು (ಪ್ರಾಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್‌ಗಳು
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ/ಉಪ ನಿರ್ದೇಶಕರುಗಳಿಗೆ } ಆಯುಕ್ತಾಲಯಗಳ ಮೂಲಕ
5. ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ), ಶಿಕ್ಷಣ ಇಲಾಖೆ, ವಾರ್ಷಿಕ ಸಂಕಲನ (Annual Compendium) ನಲ್ಲಿ ಪ್ರಕಟಿಸಲು ತಿಳಿಸಿದೆ.
6. ನೋಡಲ್ ಆಫೀಸರ್, ಶಿಕ್ಷಣ ಇಲಾಖೆಯ ಮಾಹಿತಿ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -7 ಮತ್ತು 8), ಬೆಂಗಳೂರು
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು